OS – 022

## ಮೂರನೇ ಸೆಮಿಸ್ಟರ್ ಬಿ.ಕಾಂ. ಪರೀಕ್ಷೆ, ಅಕ್ಟೋಬರ್/ನವೆಂಬರ್ 2012
## (ರಿಪೀಟರ್ಸ್ ಸ್ಕೀಂ) (2011-12)
## ಕನ್ನಡ ಭಾಷೆ – III
## ಸಾಹಿತ್ಯ ಸಲ್ಲಾಪ – ೨ ಮತ್ತು ವ್ಯಾವಹಾರಿಕ ಕನ್ನಡ

Time : 3 Hours　　　　Max. Marks : 90

### ಭಾಗ – ೧

### ಸಾಹಿತ್ಯ ಸಲ್ಲಾಪ – ೨

I. ಈ ಪದ್ಯದ ಭಾವಾರ್ಥ ಬರೆಯಿರಿ : **(1×5=5)**

ಕಲಿ ಪಂದೆಯೆಂದೆ ಬಗೆಯದೆ
ಕುಲಜಂ ಕುಲಹೀನನೆಂದು ಬಗೆಯದೆ ತರುಣಂ
ಸಲೆ ವೃದ್ಧನೆಂದು ಬಗೆಯದೆ
ನೆಲೆಸುವೆ ನಿನ್ನಿಂ ನಿಕೃಷ್ಟರೆಂಬರುಮೊಳರೇ

II. ಇವುಗಳಲ್ಲಿ ಮೂರು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ : **(3×5=15)**

1) ಅಶ್ವತ್ಥಾಮನು ಲಕ್ಷ್ಮಿಯನ್ನು ಚಂಚಲೆ ಎಂದು ಏಕೆ ಕರೆಯುತ್ತಾನೆ ?

2) ಬರಪೀಡಿತ ಪ್ರದೇಶದಿಂದ ಬಂದ ರೈತರು ಕವಿಯಲ್ಲಿ ಬಿನ್ನೈಸಿಕೊಂಡಿದ್ದೇನು ?

3) ಬಸವಣ್ಣನ ಪಾತ್ರವನ್ನು ಪರಿಚಯಿಸಿ.

4) ಬಸ್ವಿಯು ಮಗನನ್ನು ಶಿವಣ್ಣನ ಮನೆಗೆ ಕೆಲಸಕ್ಕೆ ಕಳುಹಿಸಲು ಕಾರಣವೇನು ?

5) ಸಂಸ್ಕೃತಿಯನ್ನು ಕುರಿತು ಕಾರಂತರ ನಿಲುವುಗಳೇನು ?

III. ಇವುಗಳಲ್ಲಿ ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(3×10=30)**

1) ಅಶ್ವತ್ಥಾಮನ ಪ್ರತೀಕಾರ ಹಾಗೂ ದುರ್ಯೋಧನನ ಅವಸಾನ 'ನಿನ್ನಿಂ ನಿಕೃಷ್ಟರೆಂಬರುಮೊಳರೆ' ಕವಿತೆಯಲ್ಲಿ ಹೇಗೆ ನಿರೂಪಿತವಾಗಿದೆ ?

2) ಇಬ್ಬರು ರೈತರು ಕವಿತೆಯ ಸಾರಾಂಶವನ್ನು ಬರೆಯಿರಿ.

3) ಬಿಜ್ಜಳ, ಮಂಚ್ಯಣಕ್ರಮಿತ, ಜಗದೇವ–ಇವರಲ್ಲಿ ಇಬ್ಬರ ಪಾತ್ರವನ್ನು ಪರಿಚಯಿಸಿ.

4) 'ಕಳ್ಳುಬಳ್ಳಿ' ಕಥೆಯ ಸ್ವಾರಸ್ಯವನ್ನು ವಿಶ್ಲೇಷಿಸಿ.

5) 'ಕೈಹಿಡಿದವರು' ಎಂಬ ಶೀರ್ಷಿಕೆ ಪ್ರಬಂಧಕ್ಕೆ ಒಪ್ಪುತ್ತದೆಯೆ ? ವಿಚಾರ ಮಾಡಿ.

P.T.O.

OS – 022

## ಭಾಗ - ೨

## ವ್ಯಾವಹಾರಿಕ ಕನ್ನಡ

I. ಮೂರಕ್ಕೆ ಸಂಕ್ಷಿಪ್ತ ಉತ್ತರ ಬರೆಯಿರಿ : (3×5=15)

1) ಬದಲಾಗುತ್ತಿರುವ ಕನ್ನಡ ಭಾಷೆ

2) ತಲೆಬರಹ (ಶಿರೋನಾಮೆ)

3) ಆದೇಶ ಪತ್ರ

4) ಓದುಗರ ಪತ್ರ

5) ರಾಜಕೀಯ ವಿದ್ಯಮಾನ

II. ಈ ಗದ್ಯಭಾಗವನ್ನು ಸಂಕ್ಷಿಪ್ತಗೊಳಿಸಿ ಶೀರ್ಷಿಕೆಯನ್ನು ಬರೆಯಿರಿ : (1×5=5)

ನಮ್ಮ ಮನೆ ಮಲೆನಾಡಿನ ವನಾಲಂಕೃತ ಗಿರಿ ಶ್ರೇಣಿಗಳ ತೊಡೆಯ ಮೇಲೆ ಕೂತಿದೆ. ನಮ್ಮ ಮನೆಯ ಹಿತ್ತಿಲು ಕಡೆಯನ್ನು ನಾವು ಬೆಟ್ಟದಿಂದ ಕಡಿದು ಯುದ್ಧ ಮಾಡಿ ಗೆದ್ದು ಕೊಂಡಿದ್ದೇವೆ. ಮನೆಯಿಂದ ಪೂರ್ವದಿಕ್ಕಿಗೆ ಹತ್ತು ಮಾರು ಹೋಗುವುದರೊಳಗಾಗಿ ಬೆಟ್ಟವೇರಿ ಕಾಡಿನಲ್ಲಿ ತೂರಬೇಕು. ಮನೆಗೆ ಪೂರ್ವೋತ್ತರ ದಕ್ಷಿಣ ಭಾಗಗಳಲ್ಲಿ ಭೀಮಾಕಾರದ ಪರ್ವತಶ್ರೇಣಿಗಳು ದಿಗಂತವನ್ನು ನಡುಬಾನಿಗೆತ್ತಿ ನಿಂತಿವೆ. ಪಶ್ಚಿಮ ಭಾಗದಲ್ಲಿಯೂ ಬೆಟ್ಟಗಳಿವೆ. ಆದರೆ ಒಂದು ಮೈಲಿಯಷ್ಟು ದೂರ ನಡುವೆಯೇನೋ ಬೇಕಾದಷ್ಟು ಕಾಡುಗಳಿವೆ. ನಮ್ಮ ಮನೆಗೂ ಪೂರ್ವಾದ್ರಿಗೂ ನಡುವೆ ನಮ್ಮ ಅಡಕೆ ತೋಟದ ಒಂದು ತುದಿಸೆರಗೂ ಹಬ್ಬಿಕೊಂಡಿದೆ. ಆ ಸೆರಗಿನಲ್ಲಿಯೇ ನಮ್ಮ ಮನೆಯ ಕರೆಯಿದೆ. ಕೆರೆಗೂ ಮನೆಗೂ ಅರ್ಧ ಫರ್ಲಾಂಗು ದೂರವಿದೆ. ಕೆರೆಬೆಟ್ಟದ ಬುಡದಲ್ಲಿ ಅರಣ್ಯದ ಮಡಿಲಲ್ಲಿ ಮಲಗಿದೆ. ಕಾಡಿನ ಹೆಮ್ಮರಗಳು, ಪೊದೆಗಳು, ಬಿದಿರುವ ಮೆಳೆಗಳು ಅದರ ನೀರಿನ ಮೇಲೆ ಚಾಚಿಕೊಂಡಿವೆ. ಪ್ರಾತ:ಕಾಲದ ತರುಣಾರುಣ ಜ್ಯೋತಿಯಲ್ಲಿ ನೋಡಿದರೆ ಮೈಮರೆಸುವಂತೆ ಮನೋಜ್ಞವಾಗಿರುವುದು..

III. ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : (2×10=20)

1) ವ್ಯಾವಹಾರಿಕ ಪತ್ರದ ವಿವಿಧ ಅಂಗಗಳನ್ನು ಮಾದರಿಯೊಂದಿಗೆ ಪರಿಚಯಿಸಿ.

2) ವಿಚಾರಣಾ ಪತ್ರ ಎಂದರೇನು ? ಅದರ ಒಂದು ಮಾದರಿ ಪತ್ರವನ್ನು ಬರೆಯಿರಿ.

3) ಸುತ್ತೋಲೆ ಎಂದರೇನು ? ಸಾರ್ವಜನಿಕ ಆರೋಗ್ಯಜಾಗೃತಿ ಬಗೆಗೆ ಜಿಲ್ಲಾಧಿಕಾರಿಗಳು ತಾಲ್ಲೂಕಾಧಿಕಾರಿಗಳಿಗೆ ಬರೆಯುವ ಸುತ್ತೋಲೆಯನ್ನು ಬರೆಯಿರಿ.

4) ಅಭ್ಯರ್ಥನ ಪತ್ರ ಎಂದರೇನು ? ಸಂಕ್ಷಿಪ್ತ ವ್ಯಕ್ತಿವಿವರದ ಮಾದರಿಯೊಂದನ್ನು ಬರೆಯಿರಿ.